


# ದೃಷ್ಟಿಕೋನದಲ್ಲಿ ಐಬು ಇದು ಬದಲಾವಣೆಯ ಸಮಯ

ಲೈಂಗಿಕ ಅಲ್ಪಸಂಖ್ಯಾತರನ್ನು ಸಹಜ ಮನುಷ್ಯರನ್ನಾಗಿ ನೋಡಬಲ್ಲ ಶಕ್ತಿ ನಾವು ಬಳಸುತ್ತಿರುವ ಭಾಷೆಯಲ್ಲಿಲ್ಲ. ಆ ಶಕ್ತಿ ಭಾಷೆಗೆ ದಕ್ಕಬೇಕಾದರೆ, ಮೊದಲ ಬದಲಾವಣೆ ನಮ್ಮೊಳಗಿನಿಂದಲೇ ಆಗಬೇಕು.

■ **ಮಹತಿ**

ತನ್ನ ವಿಚಾರ ಹಾಗೂ ಭಾವನೆಗಳನ್ನು ಸಮಾಜದೊಂದಿಗೆ ಹಂಚಿಕೊಳ್ಳುವುದು ಲೇಖಕನೊಬ್ಬನ ಬರವಣಿಗೆಯ ಮುಖ್ಯ ಉದ್ದೇಶ. ತನ್ನ ಕಾಲಕ್ಕೆ ಸ್ಪಂದಿಸುವ ಗುಣವಿದ್ದಷ್ಟೂ ಬರವಣಿಗೆ ಮತ್ತು ಬರಹಗಾರನ ಪ್ರಸ್ತುತತೆ ಹೆಚ್ಚಾಗುತ್ತದೆ. ಆದರೆ, ತನ್ನ ಬದುಕು ಮತ್ತು ಭಾವನೆಗಳ ಅಭಿವ್ಯಕ್ತಿಗೆ ಭಾಷೆಯೊಂದರಲ್ಲಿ ಸೂಕ್ತವಾದ ಪದಗಳಿಲ್ಲ ಎನ್ನುವುದು ಸಾಹಿತ್ಯ ಸೃಷ್ಟಿಗೆ ಕಾರಣವಾಗಬಹುದೆ? ಹೌದೆನ್ನುತ್ತಾರೆ ಶಿಲೋಕ್ ಮುಕೋಟಿ.

ಶಿಲೋಕ್ ಲೈಂಗಿಕ ಅಲ್ಪಸಂಖ್ಯಾತರ ಹಕ್ಕುಗಳ ಕಾರ್ಯಕರ್ತೆ, ಕಲಾವಿದೆ ಹಾಗೂ ಕವಯಿತ್ರಿ. ಇತ್ತೀಚೆಗೆ ಕವಿಗೋಷ್ಠಿಯೊಂದರಲ್ಲಿ ಪದ್ಯ ಓದುವ ಸಂದರ್ಭದಲ್ಲಿ, ತಮ್ಮ ಕನ್ನಡ ಬರವಣಿಗೆಯ ಹಿಂದಿನ ಕಾರಣಗಳ ಕುರಿತು ಅವರು ಮಾತನಾಡಿದ್ದು ಕುತೂಹಲಕರವಾಗಿತ್ತು. ‘ಲೈಂಗಿಕ ಅಲ್ಪಸಂಖ್ಯಾತರ ಕುರಿತ ಬರವಣಿಗೆಗೆ ಕನ್ನಡದಲ್ಲಿ ಸಮರ್ಪಕ ಪದಗಳಿಲ್ಲ. ಉದಾಹರಣೆಗೆ, ಗಂಡು–ಹೆಣ್ಣಿನ ನಡುವಿನ ಪ್ರೇಮವನ್ನು ಪ್ರೇಮ ಎಂದು ಹೇಳಿದಂತೆ, ಸಲಿಂಗಿಗಳ ಕುರಿತು ಸಮಾಜ ಹೇಳುವುದಿಲ್ಲ. ಗಂಡು ಹೆಣ್ಣಿನದು ಪ್ರೇಮಸಂಬಂಧವಾದರೆ, ಸಲಿಂಗಿಗಳ ವಿಷಯದಲ್ಲದು ‘ಸಲಿಂಗಕಾಮ’ ಆಗುತ್ತದೆ. ಇಂಥ ತಪ್ಪು ಬಳಕೆಗಳನ್ನು ಸರಿಪಡಿಸುವ ಕಾರಣದಿಂದಾಗಿ ಕನ್ನಡದಲ್ಲಿ ಬರೆಯುತ್ತಿರುವೆ’ ಎನ್ನುವ ಅರ್ಥದಲ್ಲಿ ಶಿಲೋಕ್ ಮಾತನಾಡಿದರು.

ಶಿಲೋಕ್ ಮಾತುಗಳು ಲೈಂಗಿಕ ಅಲ್ಪಸಂಖ್ಯಾತರ ಕುರಿತು ಸಮಾಜದಲ್ಲಿನ ಮಡಿವಂತಿಕೆಯ ಕುರಿತ ಪ್ರಶ್ನೆಯಾಗಿರುವಂತೆಯೇ, ಬಹಳಷ್ಟು ಸಂದರ್ಭಗಳಲ್ಲಿ ನಮಗೆ ತಿಳಿಯದಂತೆಯೇ ಅಸೂಕ್ಷ್ಮವಾಗಿ ನಡೆದುಕೊಳ್ಳುವುದರತ್ತಲೂ ಗಮನ ಸೆಳೆಯುವಂತಿವೆ.

ಲೈಂಗಿಕ ಅಲ್ಪಸಂಖ್ಯಾತರ ವಿಷಯವಿರಲಿ, ಮಹಿಳೆಯರ ಬಗ್ಗೆಯೇ ಸಮಾಜ ಮುಕ್ತವಾದ ನಿಲುವು ಹೊಂದಿಲ್ಲ. ಸಮಾನ ಅವಕಾಶ ಎನ್ನುವುದು ಒಂದು ಆದರ್ಶವಾಗಿದೆಯೇ ಹೊರತು, ಕಾರ್ಯರೂಪಕ್ಕೆ ಬಂದಿರುವ ವಾಸ್ತವವಾಗಿಲ್ಲ. ಜನಸಾಮಾನ್ಯರ ಮಾತಿರಲಿ, ಜನಪ್ರತಿನಿಧಿಗಳೇ ಹೆಣ್ಣಿನ ಕುರಿತು ಲಘುವಾಗಿ ಮಾತನಾಡುವ ವರದಿಗಳು ಆಗಾಗ್ಗೆ ಮಾಧ್ಯಮಗಳಲ್ಲಿ ಪ್ರಕಟಗೊಳ್ಳುತ್ತಲೇ ಇರುತ್ತವೆ. ರಾಜಕಾರಣಿಯೊಬ್ಬ ತನ್ನ ಎದುರಾಳಿಯನ್ನು ಹಳಿಯುವ ಉತ್ಸಾಹದಲ್ಲಿ ಬಳೆ ಮತ್ತು ಸೀರೆಯನ್ನು ಸಂಕೇತಗಳಾಗಿ ಬಳಸುವುದು ಸಹಜ ಎನ್ನುವಂತಾಗಿಬಿಟ್ಟಿದೆ. ‘ಅತ್ಯಾಚಾರದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗದಿದ್ದರೆ ಅದನ್ನು ಆನಂದಿಸಿ’ ಎನ್ನುವಂತಹ ಮಾತು ಸದನದಲ್ಲೇ ಕೇಳಿಸುತ್ತದೆ ಹಾಗೂ ಆ ಮಾತು ಸದನದಲ್ಲಿನ ಯಾರಿಗೂ ಆ ಕ್ಷಣಕ್ಕೆ ಆಕ್ಷೇಪಾರ್ಹ ಎನ್ನಿಸುವುದಿಲ್ಲ.

ಲೈಂಗಿಕ ಅಲ್ಪಸಂಖ್ಯಾತರನ್ನು ಸಹಾನುಭೂತಿಯಿಂದ ನೋಡಬೇಕಾದುದು ಆರೋಗ್ಯಕರ ಸಮಾಜದ ಲಕ್ಷಣ. ದುರದೃಷ್ಟವಶಾತ್, ಅವರ ಬಗೆಗಿನ ಪೂರ್ವಗ್ರಹಗಳಿಂದ ಹೊರಬರುವುದು ಬಹುತೇಕರಿಗೆ ಸಾಧ್ಯವಾಗಿಲ್ಲ. ಲೈಂಗಿಕ ಅಲ್ಪಸಂಖ್ಯಾತರನ್ನು ಅನ್ಯಗ್ರಹಜೀವಿಗಳಂತೆ ನೋಡುವವರು ಹಾಗೂ ಅವರ ಬಗ್ಗೆ ಮಾತನಾಡಲು ಹಿಂಜರಿಯುವವರ ಸಂಖ್ಯೆ ಕಡಿಮೆಯೇನಿಲ್ಲ. ಈ ಪೂರ್ವಗ್ರಹ ಹಾಗೂ ಹಿಂಜರಿಕೆ ಆ ಸಮುದಾಯವನ್ನು ಕುರಿತ ನಮ್ಮ ಮಾತುಕತೆ ಮತ್ತು ಬರವಣಿಗೆಯಲ್ಲೂ ಕಾಣಿಸಿಕೊಳ್ಳುವುದು ಅಸಹಜವೇನಲ್ಲ. ಶಿಲೋಕ್ ಹೇಳಹೊರಟಿದ್ದು ಇಂಥ ಅಸೂಕ್ಷ್ಮತೆಯನ್ನೇ. ಭಾಷೆ ಹೆಚ್ಚು ಸಮರ್ಪಕ ಆಗಬೇಕಾದರೆ, ಅದಕ್ಕೆ ಮೊದಲು ನಮ್ಮ ಮನೋಭಾವ ಬದಲಾಗಬೇಕು. ಆ ಬದಲಾವಣೆಯನ್ನು ಒಳಗಿನಿಂದಲೇ ಮಾಡುವ ಕೆಲಸವನ್ನು ಶಿಲೋಕ್ ಅಂಥವರು ಮಾಡಹೊರಟಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ಸಲಿಂಗಿಗಳು ಹಾಗೂ ಹಿಜ್ಡಾಗಳ ಬದುಕು ಕನ್ನಡ ಸಾಹಿತ್ಯದಲ್ಲಿ ತೆರೆದುಕೊಳ್ಳುತ್ತಿದೆ. ದೃಶ್ಯಮಾಧ್ಯಮ ಕೂಡ ಲೈಂಗಿಕ ಅಲ್ಪಸಂಖ್ಯಾತರನ್ನು ಸಹಾನುಭೂತಿಯಿಂದ ಕಾಣಲು ಪ್ರಯತ್ನಿಸುತ್ತಿದೆ. ಅಂಥ ಕೆಲವು ಪ್ರಯತ್ನಗಳನ್ನು ಅಲ್ಪಸಂಖ್ಯಾತ ಸಮುದಾಯದ ಒಳಗಿನವರೇ ಮಾಡುತ್ತಿರುವುದರಿಂದ, ಅವರಿಂದ ರೂಪುಗೊಳ್ಳುವ ಸಾಹಿತ್ಯ ಅಥವಾ ಕಲಾಕೃತಿ ಹೆಚ್ಚು ಅಧಿಕೃತವಾಗಿರುತ್ತದೆ. ಅಂಥ ಸಂವೇದನೆಗಳನ್ನು ಗುರ್ತಿಸುವುದು ಹಾಗೂ ಸ್ಪಂದಿಸುವುದು ಎಲ್ಲ ಸಹೃದಯರ ಕರ್ತವ್ಯ.

ಮಹಿಳೆಯರು, ಮಕ್ಕಳು ಮತ್ತು ಲೈಂಗಿಕ ಅಲ್ಪಸಂಖ್ಯಾತರ ಬಗ್ಗೆ ನಾವು ಸೂಕ್ಷ್ಮವಾಗಿ ನಡೆದುಕೊಳ್ಳಬೇಕಾಗಿದೆ. ಶತಮಾನಗಳ ಕಾಲ ನಮ್ಮೊಳಗೆ ಉಳಿದುಬಂದಿರುವ ಪೂರ್ವಗ್ರಹಗಳಿಂದ ದೂರವಾಗುವುದು ಸುಲಭವೇನಲ್ಲ. ಆ ಬದಲಾವಣೆಯ ಮೊದಲ ಹಂತವಾಗಿ, ನಮ್ಮ ದೃಷ್ಟಿಕೋನದಲ್ಲಿ ಐಬಿರುವುದನ್ನು ಒಪ್ಪಿಕೊಳ್ಳಬೇಕು. ನಮ್ಮ ಮಾತು–ನಡವಳಿಕೆಯಲ್ಲಿ ಯಾರಿಗಾದರೂ ಸಮಸ್ಯೆ ಕಾಣಿಸಿದರೆ, ಅದನ್ನು ಬದಲಿಸಿಕೊಳ್ಳುವ ಮುಕ್ತ ಮನಸ್ಸು ನಮ್ಮದಾಗಿರಬೇಕು. ನಮ್ಮ ದೃಷ್ಟಿಕೋನ, ಮಾತು ಮತ್ತು ನಡವಳಿಕೆಯನ್ನು ಪ್ರಜ್ಞಾಪೂರ್ವಕವಾಗಿ ಬದಲಿಸಿಕೊಳ್ಳುವ ಸಮಯವಿದು.

ಪ್ರತಿಕ್ರಿಯಿಸಿ: feedback@sudha.co.in

(ಅನಿವಾರ್ಯ ಕಾರಣಗಳಿಂದ ‘ಸುಖೀ ದಾಂಪತ್ಯ’ ಈ ವಾರ ಪ್ರಕಟಗೊಂಡಿಲ್ಲ. –ಸಂ)